ಅಂದು ವಿಠಲ ಅವನೊಡನೆ ಮಾತನಾಡಲಿಲ್ಲ. ಮುಂದೊಮ್ಮೆ ಒಂದು ಯಜ್ಞಕ್ಕೆ ಎಲ್ಲಾ ಸಿದ್ಧತೆ ನಡೆದಿರುವಾಗ ವೇಗದಿಂದ ಬಂದ ಕುದುರೆಯೊಂದು ಯಜ್ಞವೇದಿಕೆಯನ್ನು ತುಳಿದು ಯಜ್ಞ ಸಾಮಗ್ರಿಗಳನ್ನೆಲ್ಲಾ ಚೆಲ್ಲಾಡಿ ಓಡಿ ಹೋಯಿತು. ಆಗ ಕುದುರೆಯನ್ನು ಅಟ್ಟಿಸಿಕೊಂಡು ಹೋದ ನಾಮದೇವ. ಸಂಜೆ ದೇವಾಲಯದಲ್ಲಿ ವಿಠ್ಠಲ, ''ನೀನು ನನ್ನೊಡನೆ ಮಾತನಾಡುತ್ತಿರಬಹುದು. ಎಲ್ಲಾ ರೂಪದಲ್ಲಿರುವ ನನ್ನನ್ನು ನೀನು ಗುರುತಿಸಲಾಗದೆ ಹೋಗುತ್ತಿರುವೆ. ಅಂದು ಬೆಕ್ಕಿನ ರೂಪದಲ್ಲಿ, ಇಂದು ಕುದುರೆಯ ರೂಪದಲ್ಲಿ ಬಂದಿದ್ದವನೂ ನಾನೇ. ಈ ರೀತಿಯ ಜ್ಞಾನ ಹೊಂದಲು ನೀನು ಗುರುವನ್ನು ಆಶ್ರಯಿಸಬೇಕು'' ಎಂದು ನಾಮದೇವನಿಗೆ ನಿರ್ಬಂಧಿಸಿದ ಭಾಗ ಆಧ್ಯಾತ್ಮಿಕ ಪಥದಲ್ಲಿ ಗುರುವಿನ ಅಗತ್ಯವನ್ನೂ, ಹಿರಿಮೆಯನ್ನೂ ಸ್ಪಷ್ಟಪಡಿಸುತ್ತದೆ.

**ದುರ್ಲಭೋ ವಿಷಯತ್ಯಾಗಃ ದುರ್ಲಭಂ ತತ್ತ್ವದರ್ಶನಂ ।**
**ದುರ್ಲಭಾ ಸಹಜಾವಸ್ಥಾ ಸದ್ಗುರೋಃ ಕರುಣಾಂ ವಿನಾ ॥**

'ಸದ್ಗುರುವಿನ ಕರುಣೆ ಇಲ್ಲದೆ ತತ್ತ್ವವನ್ನು ತಿಳಿಯುವುದಾಗಲೀ, ನಮ್ಮ ನಿಜವಾದ ಸ್ವರೂಪವಾದ ಸಚ್ಚಿದಾನಂದದ ಅನು ಭವವನ್ನು ಹೊಂದುವುದಾಗಲೀ ಸಾಧ್ಯವಿಲ್ಲ.'

## ಗುರು-ಭಕ್ತಿ

**ಚೋದಕೋ ದರ್ಶಯೇನ್ಮಾರ್ಗಂ ಬೋಧಕೋ ಸ್ಥಾನದರ್ಶಕಃ ।**
**ಮೋಕ್ಷದಸ್ತು ಪರಂತತ್ತ್ವಂ ಯಜ್ಜ್ಞಾತ್ವಾ ಪರಮಶ್ನುತೇ ॥**

*(ಬ್ರಹ್ಮವಿದ್ಯಾ ಉಪನಿಷತ್, ೫೨)*

ಸಂಸಾರದಿಂದ ಉದ್ಧಾರವನ್ನು ಹೊಂದಬೇಕಾದವನಿಗೆ ಚೋದಕನು - ಸಾಧಕನು ಸಾಗಬೇಕಾದ ಮಾರ್ಗವನ್ನು ತೋರಿಸಿದರೆ 'ಬೋಧಕ'ನು ನಮ್ಮ ಮೂಲ ನೆಲೆಯನ್ನು ತೋರಿಸುತ್ತಾನೆ. ಆದರೆ 'ಮೋಕ್ಷದ'ನು ಪರತತ್ತ್ವವನ್ನು ತಿಳಿಸಿಕೊಟ್ಟು ನಮ್ಮ ಮೂಲ ನೆಲೆಯಲ್ಲಿ ನಾವು ನೆಲೆಗೊಳ್ಳುವಂತೆ ಮಾಡುತ್ತಾನೆ. ಇಂತಹ ಗುರುವಿನಲ್ಲಿ ಭಕ್ತಿ ಇಡಬೇಕು. ದೇವರಷ್ಟೇ ಪರಾ ಭಕ್ತಿಯನ್ನು ಗುರುವಿನಲ್ಲೂ ಹೊಂದಿದ್ದರೆ ಎಲ್ಲಾ ವಿಚಾರಗಳೂ, ವಿದ್ಯೆಗಳೂ ತಮ್ಮಿಂದ ತಾವೇ ತಮ್ಮ ಸ್ವರೂಪವನ್ನು ಬಿಚ್ಚಿ ತೋರಿಸಿಕೊಡುತ್ತವೆ. ಆದುದರಿಂದ **'ಗುರುಭಕ್ತಿಂ ಸದಾ ಕುರ್ಯಾಚ್ಛ್ರೇಯಸೇ ಭೂಯಸೇ ನರಃ ।'** ಎಂದು ಗುರುಗೀತೆ ಶ್ರೇಯೋಕಾಂಕ್ಷಿಯಾದವನು ಗುರುವಿನಲ್ಲಿ ಭಕ್ತಿ ಇಡಬೇಕೆಂದು ತಿಳಿಸುತ್ತದೆ.

ನೈಮಿಷಾರಣ್ಯದಲ್ಲಿ ತಪಸ್ಸಿನಲ್ಲಿ ಮುಳುಗಿದ್ದ ಪುಷ್ಕರ ಎಂಬ ಗುರುವಿನ ಬಳಿ, ವೇದವೇದಾಂತಗಳನ್ನು ಬಲ್ಲ, ಗುರುಕುಲವೊಂದರ ಕುಲಪತಿಯಾಗಿದ್ದ ಧ್ವಜದತ್ತನೆಂಬುವವನು ಸಂಕಟಗಳಿಂದ ಬಿಡುಗಡೆ ಬಯಸಿ ಬರುತ್ತಾನೆ. ಗುರುವು ಅವನಿಗೆ ಮಂತ್ರ ಉಪದೇಶಿಸುತ್ತಾನೆ. ಧ್ವಜದತ್ತ ಗುರು ಕೊಟ್ಟ ಮಂತ್ರ ಜಪಿಸುತ್ತಾ ವರ್ಷಗಳೇ ಉರುಳುತ್ತವೆ. ಆ ಸಂದರ್ಭದಲ್ಲಿ ಅತ್ಯಂತ ನೀಚ ಕೆಲಸಗಳನ್ನು ಮಾಡಿ ಅದರ ಫಲವಾಗಿ ಅನೇಕ ರೋಗಗಳ ಗಣಿಯಾಗಿದ್ದ ಗಾಲವ ಎಂಬುವವನು ಅಲ್ಲಿಗೆ ಬರುತ್ತಾನೆ. ಪುಷ್ಕರನಲ್ಲಿ ಅವನು ಶ್ರದ್ಧೆ ಭಕ್ತಿಗಳನ್ನು ಹೊಂದಿ, ಸೇವಿಸಿ, ಆತನು ಕೊಟ್ಟ ಮಂತ್ರವನ್ನು ಒಂದು ಮಾಲೆ ಜಪಿಸುವಲ್ಲಿ ಪರಮಾತ್ಮನ ಸಾಕ್ಷಾತ್ಕಾರ ಪಡೆದು ರೋಗಮುಕ್ತನಾಗುತ್ತಾನೆ. ಆದರೆ ತಾನು ಜ್ಞಾನಿ ಎಂಬ ಅಭಿಮಾನ ಇದ್ದ ಕಾರಣ ಧ್ವಜದತ್ತನು ಗುರುವಿನಲ್ಲಿ ಗುರುಕೊಟ್ಟ ಮಂತ್ರದಲ್ಲಿ ವಿಶ್ವಾಸಮಾಡದೆ ಇದ್ದುದು ಆತನು ವರ್ಷಗಳು ಕಳೆದರೂ ಫಲ ಪಡೆಯದೇ ಇರುವುದಕ್ಕೆ ಕಾರಣ. ಇದನ್ನು ಅವನು ಗಾಲವನ ಅನುಭವದಿಂದ ಅರಿತುಕೊಳ್ಳುತ್ತಾನೆ.

## ವ್ಯಾಸ

ಇಂತಹ ಗುರುಗಳಿಗೆಲ್ಲಾ ಮೂಲ ಪುರುಷರು ವ್ಯಾಸರು. ಗೀತೆಯಲ್ಲಿ ಕೃಷ್ಣ, **'ಮುನೀನಾಮಪ್ಯಹಂ ವ್ಯಾಸಃ'** – *(೧೦.೩೭)* ಎಂದು ತನ್ನನ್ನು ವ್ಯಾಸರೆಂದು ಹೇಳಿಕೊಂಡಿದ್ದಾನೆ. ಯೋಗ ಸೂತ್ರದಲ್ಲಿ ಪತಂಜಲಿಗಳು ಹೇಳುವಂತೆ– **ಸ ಪೂರ್ವೇಷಾಮಪಿ**



**ಗುರುಃ ಕಾಲೇನ ಅನವಚ್ಛೇದಾತ್** *(೧.೨೬)* ಕಾಲದ ಮಿತಿಗೆ ಒಳಗಾಗದ ಕಾರಣ ಲೋಕವಿಖ್ಯಾತ ಎಲ್ಲಾ ಗುರುಗಳಿಗೂ ಗುರುವಾದವನು ಪರಮಾತ್ಮ. ಈ ಗುರುರೂಪಿ ಪರಮಾತ್ಮನ ವ್ಯಾಸ ರೂಪದ ಆವಿರ್ಭಾವದ ದಿನವನ್ನು (ಆಷಾಢ ಪೂರ್ಣಿಮಾ ದಿನವನ್ನು) ಗುರುಪೂರ್ಣಿಮಾ ಎಂದು ಕರೆಯುತ್ತಾರೆ. ಅಂದು ವ್ಯಾಸರೂಪಿ ಗುರುರೂಪಿ ಪರಮಾತ್ಮನನ್ನು ಆರಾಧಿಸುತ್ತಾರೆ.

## ವ್ಯಾಸ ಅವತಾರ ಹಿನ್ನೆಲೆ

ಪೌರಾಣಿಕ ಕಥೆಯೊಂದು ಪರಮಾತ್ಮ ವ್ಯಾಸರೂಪದಿಂದ ಅವತರಿಸಲು ಕಾರಣವನ್ನು ತಿಳಿಸುತ್ತದೆ. ಒಂದೊಮ್ಮೆ ಭೀಕರವಾದ ಬರಗಾಲ ಉಂಟಾಗುತ್ತದೆ. ಕುಲಪತಿಗಳು ತಮ್ಮ ತಮ್ಮ ಗುರುಕುಲವನ್ನು ನಡೆಸಲಾರದವರಾಗುತ್ತಾರೆ. ಒಬ್ಬೊಬ್ಬ ಕುಲಪತಿಯು, ಅನೇಕ ವಿದ್ಯೆಗಳ ಗಣಿ. ಅವರು ತಮ್ಮ ಉಳಿವಿಗಾಗಿ ಆಹಾರವನ್ನರಸುತ್ತಾ ಬರುತ್ತಿರುತ್ತಾರೆ. ಯೋಗಾಯೋಗ, ಎಲ್ಲರೂ ಒಂದೆಡೆ ಸೇರುತ್ತಾರೆ. ಹಾಗೆಯೇ ಸಾಗುತ್ತಾ ಇರುವಾಗ ಒಂದೆಡೆ

ಸಸ್ಯಸಮೃದ್ಧಿ ಇರುವ ಜಾಗ ಅವರಿಗೆ ಕಾಣುತ್ತದೆ. ಅದು ಮಹಾ ಯೋಗಿಶ್ರೇಷ್ಠ ಗೌತಮರ ಆಶ್ರಮ. ಅವರು ಇವರೆಲ್ಲರನ್ನೂ ಪ್ರೀತಿ ಆದರಗಳಿಂದ ಗೌರವಿಸಿ ಸತ್ಕರಿಸಿ ತಮ್ಮ ಆಶ್ರಮದಲ್ಲೇ ಅವರೆಲ್ಲರಿಗೂ ಉಳಿದುಕೊಳ್ಳಲು ಆಶ್ರಯ ಕೊಡುತ್ತಾರೆ. ಕಾಲ ಗತಿಯಲ್ಲಿ ಬರಗಾಲ ಕಳೆದು ಒಳ್ಳೆಯ ಕಾಲ ಬಂದಿತು. ಆದರೆ ಗೌತಮರು ಆ ಎಲ್ಲಾ ಕುಲಪತಿಗಳು ಎಷ್ಟು ಬೇಡಿಕೊಂಡರೂ ತಮ್ಮ ತಮ್ಮ ಆಶ್ರಮಗಳಿಗೆ ಹೋಗಲು ಅನುಮತಿಸುವುದಿಲ್ಲ. ಹಾಗಾಗಿ ಎಲ್ಲಾ ಜ್ಞಾನಿ ಋಷಿಗಳೂ ಒಂದು ಉಪಾಯವನ್ನು ಹುಡುಕುತ್ತಾರೆ. ಗೌತಮರು ಆಹ್ನಿಕಕ್ಕಾಗಿ ನದಿಗೆ ಹೋದಾಗ ಅವರ ತೋಟಕ್ಕೆ ಒಂದು ಹಸು ನುಗ್ಗಿ ತೋಟದಲ್ಲಿ ಮೇಯು ತ್ತಿರುತ್ತದೆ. ಆಹ್ನಿಕ ಮುಗಿಸಿ ಬಂದ ಗೌತಮರು ಎಷ್ಟು ಎತ್ತರದ ಧ್ವನಿ ಮಾಡಿ ಓಡಿಸಿದರೂ ಆ ಹಸು ಬೆಚ್ಚುವುದೂ ಇಲ್ಲ, ಹೋಗು ವುದೂ ಇಲ್ಲ. ಆಗ ಗೌತಮರು ''ಹೇಯ್..'' ಎಂದು ಕೂಗುತ್ತಾ ಒಂದು ದರ್ಭೆಯನ್ನು ಅದರೆಡೆಗೆ ಎಸೆಯುತ್ತಾರೆ. ಅದು ಆ ಹಸುವಿಗೆ ತಾಕಿತೋ ಇಲ್ಲವೋ ಎನ್ನುವಂತೆಯೇ ಹಸು ಸತ್ತು ಬೀಳುತ್ತದೆ. ಇದನ್ನು ನೋಡುತ್ತಿದ್ದ ಕುಲಪತಿಗಳೆಲ್ಲಾ ''ನೀನು ಗೋಹತ್ಯೆ ಮಾಡಿದವನು! ನಾವು ಇನ್ನು ಇರಲಾರೆವು'' ಎಂದು ಗೌತಮರ ಆಶ್ರಮ ಬಿಟ್ಟು ಹೊರಟು ಬಿಡುತ್ತಾರೆ.

ಸ್ವಲ್ಪ ಕಾಲ ಭ್ರಮಿತರಾಗಿದ್ದ ಗೌತಮರು ತಮ್ಮ ಪ್ರಜ್ಞಾದೃಷ್ಟಿ ಯಿಂದ ನೋಡಿದಾಗ ಇದು ಆ ಕುಲಪತಿಗಳು ಮಾಡಿದ ಕುಚೇಷ್ಟೆ ಎಂದು ಅವರಿಗೆ ಅರಿವಾಗುತ್ತದೆ. ಇದರಿಂದ ಕುಪಿತ ರಾದ ಗೌತಮರು, ''ಯಾವ ವಿದ್ಯೆಯ ಕಾರಣ ನೀವು ನನ್ನನ್ನು ಈ ವಂಚನೆಯಲ್ಲಿ ಸಿಲುಕಿಸಿದಿರೋ ಆ ನಿಮ್ಮ ಎಲ್ಲಾ ವಿದ್ಯೆಯೂ ನಾಶವಾಗಿ ಹೋಗಲಿ!'' ಎಂದು ಶಪಿಸಿಬಿಟ್ಟರು. ಇದರಿಂದ ವಿದ್ಯೆ ಗಳೆಲ್ಲದರ ನಾಶದಿಂದ ಲೋಕ ಕಗ್ಗತ್ತಲೆಯಲ್ಲಿ ಮುಳುಗಿ ಹೋಯಿತು. ಯಾಗಯಜ್ಞಾದಿ ಎಲ್ಲಾ ನಿಂತುಹೋಯಿತು. ಎಲ್ಲಾ ಲೋಕದವರೂ ಕಂಗೆಟ್ಟು ಹೋದರು. ಪರಮಾತ್ಮನಿಗೆ ಅವರಲ್ಲೊಬ್ಬ ತಮ್ಮ ಈ ದುಃಸ್ಥಿತಿಯನ್ನು ನಿವೇದಿಸಿಕೊಂಡರು. ಆಗ ನಶಿಸಿರುವ ಎಲ್ಲಾ ವಿದ್ಯೆಗಳನ್ನೂ ಉದ್ಧರಿಸಲು ತಾನು 'ವ್ಯಾಸ'ರೂಪದಿಂದ ಅವತರಿಸುವುದಾಗಿ ಪರಮಾತ್ಮನು ಅವರಿಗೆ ಅಭಯ ನೀಡುತ್ತಾನೆ. ಹೀಗೆ ಜ್ಞಾನದ ಪುನರುತ್ಥಾನಕ್ಕಾಗಿ ಪರ ಮಾತ್ಮ ತಳೆದುದು 'ವ್ಯಾಸ' ರೂಪ.

ಆದುದರಿಂದಲೇ, ಸಾಂದರ್ಭಿಕವಾಗಿ ನೆನಪಿಸಿಕೊಳ್ಳುವುದಷ್ಟೆ; ಜ್ಞಾನವಿಸ್ತಾರಕ್ಕಾಗಿ ಮಾಡುವ ಪ್ರವಚನಕಾರರ ಪೀಠವನ್ನು ಅದು ಯಾವುದೇ ಆಗಿದ್ದರೂ ಎಲ್ಲೇ ಇದ್ದರೂ 'ವ್ಯಾಸಪೀಠ' ಎನ್ನು ವರು. ಅದನ್ನು ವಿಶೇಷವಾಗಿ ಗೌರವಿಸುವರು). ಈ ಕಥೆ ಮುಖ್ಯ ಅಂಶ ಸಮಾನವಾಗಿದ್ದರೂ ಹಲವು ಬದಲಾವಣೆ ಗಳೊಡನೆ ಅನೇಕ ಪುರಾಣಗಳಲ್ಲಿ ಕಂಡುಬರುತ್ತದೆ.

### ವ್ಯಾಸ-ಗುರು-ತತ್ತ್ವ

ಕಾಲವೆಂಬುದು ವಾಯು, ನದಿಯಂತೆ ನಿರಂತರ ಚಲಿಸು ತ್ತಿರುತ್ತದೆ. ಈ ಚಲನೆ ಹಗಲು ರಾತ್ರಿಗಳಂತೆ ಉದಯ ಅಸ್ತ ಮಾನಗಳೊಡಗೂಡಿರುತ್ತದೆ. ಉದಯವಾದುದು ಕಾಲಗತಿ ಯಲ್ಲಿ ಅಸ್ತವಾಗುತ್ತದೆ. ಅಸ್ತವಾದುದು ಕಾಲಗತಿಯಲ್ಲಿ ಉದ ಯವೂ ಆಗುತ್ತದೆ. ಇದು ದೃಷ್ಟಿಯಲ್ಲಿ ಕಂಡು ಬರುವ ಸಹಜ ನಿಯಮ. ಈ ನಿಯಮವನ್ನವಲಂಬಿಸಿಯೇ ಸೃಷ್ಟಿ ಸ್ಥಿತಿ ಲಯ ಗಳಿವೆ. ಈ ಅವಧಿ ಮನ್ವಂತರಗಳೆನಿಸಿಕೊಳ್ಳುತ್ತವೆ. ಮನ್ವಂತರ ಗಳು: ಕೃತ, ತ್ರೇತಾ, ದ್ವಾಪರ, ಕಲಿಗಳ ವೃತ್ತಾಕಾರ ಚಲನೆ. ನಾಲ್ಕು ಯುಗಗಳ ೭೧ ಆವೃತ್ತ ಪೂರ್ಣ ಆದಾಗ ಒಬ್ಬ ಮನು ವಿನ ಆಳ್ವಿಕೆ ಮುಗಿಯುತ್ತದೆ ಎಂದು ಭಾರತೀಯ ಕಾಲಮಾನ ತಿಳಿಸುತ್ತದೆ. ಈ ಕಾಲ ಗತಿಯಲ್ಲಿ ಪ್ರತಿಯೊಂದು ಬಾರಿ ದ್ವಾಪರ ಯುಗ ಬರುವ ವೇಳೆಗೆ ಜ್ಞಾನದ (ಹ್ರಾಸ) ಕುಗ್ಗುವಿಕೆ ಆರಂಭ ವಾಗುತ್ತದೆ. ಈ ಯುಗದ ವೇಳೆಗೆ ಮಾನವನ ಆಯುಃ ಪ್ರಮಾಣದಲ್ಲೂ ಕುಗ್ಗುವಿಕೆ ಉಂಟಾಗುತ್ತದೆ. ಹಾಗಾಗಿ ಇರುವ ಅಲ್ಪ ಆಯುವಿನಲ್ಲಿ ಅಪಾರವಾದ ವೇದ ಜ್ಞಾನವನ್ನು ಅರಿತು ಅನುಷ್ಠಾನಕ್ಕೆ ತಂದು ಜ್ಞಾನದ ಪರಿಪೂರ್ಣತೆಯನ್ನು ಹೊಂದು ವುದು ಕಲ್ಪನೆಗೂ ನಿಲುಕದ ಮಾತಾಗುತ್ತದೆ. ಅದಕ್ಕಾಗಿ ಈ ದ್ವಾಪರ ಯುಗದಲ್ಲಿ ಪರಮಾತ್ಮ ವ್ಯಾಸರೂಪಿಯಾಗಿ ಬಂದು ಅಪಾರವಾದ ವೇದರಾಶಿಯನ್ನು ವಿಂಗಡಿಸಿ ಲೋಕಕ್ಕೆ ಅನು ಗ್ರಹಿಸುತ್ತಾನೆ. ಹೀಗೆ ಅವನು ಅವತರಿಸುವುದು ಜ್ಞಾನದ ವಿಕಾಸ ಕ್ಕಾಗಿ. ಆದುದರಿಂದ ವ್ಯಾಸನನ್ನು 'ಗುರು' ಎಂದು ಸಾಧಾರಣ ಶಬ್ದದಿಂದ ಕರೆಯಲಾಗುತ್ತದೆ. ಲೋಕವನ್ನೆಲ್ಲಾ ತುಂಬಿಬಿಟ್ಟಿದ್ದ ಅಜ್ಞಾನ ಅಂಧಕಾರವನ್ನು ದೂರಮಾಡಿ ಲೋಕದಲ್ಲಿ ಮತ್ತೆ ಜ್ಞಾನದ ಬೆಳಕನ್ನು ಚೆಲ್ಲಿ ಜೀವಲೋಕವನ್ನು ಜೀವಂತಗೊಳಿಸಿ ದವನು **ವ್ಯಾಸ ಗುರು.**

**ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ।**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥**

ಒಂದು ಕಲ್ಪಕ್ಕೆ (ಬ್ರಹ್ಮನ ದಿನ) ಹದಿನಾಲ್ಕು ಮನುಗಳಿರು ತ್ತಾರೆ. ಅದರಲ್ಲಿ ಈಗ ನಡೆಯುತ್ತಿರುವುದು ಏಳನೆಯ ಮನ್ವಂ ತರ, ವೈವಸ್ವತ ಮನ್ವಂತರ. ಇದರಲ್ಲಿ ೭೧ ಆವರ್ತದಲ್ಲಿ ೨೭ ಆವರ್ತಗಳು ಕಳೆದು ೨೮ನೆಯ ಆವರ್ತ ನಡೆಯುತ್ತಿದೆ. ಹೀಗೆ ಪ್ರತಿ ಆವರ್ತದ ದ್ವಾಪರದಲ್ಲಿ ಅವತರಿಸಿದ ವ್ಯಾಸರ ಹೆಸರು ಗಳನ್ನು ಪುರಾಣಗಳು ಪಟ್ಟಿಮಾಡಿ ತಿಳಿಸುತ್ತವೆ.

ಮಹಾಭಾರತವು 'ವ್ಯಾಸ' ಪದಕ್ಕೆ ನಿರುಕ್ತವನ್ನು ಹೀಗೆ ತಿಳಿಸು ತ್ತದೆ: **ಯೋ ವ್ಯಸ್ಯ ವೇದಾಂಶ್ಚತುರಸ್ತಪಸಾ ಭಗವಾನೃಷಿಃ ।**
**ಲೋಕೇ ವ್ಯಾಸತ್ವಮಾಪೇದೇ...** *(೧.೧೦೫.೧೪)*

**ವೇದಮೇಕಂ ಚತುರ್ಭೇದಂ ಕೃತ್ವಾ ಶಾಖಾಶತೈರ್ವಿಭುಃ ।**
**ಕರೋತಿ ಬಹುಲಂ ಭೂಯಃ ವೇದವ್ಯಾಸ ಸ್ವರೂಪಧೃಕ್ ॥**

**ದ್ವಾಪರೇ ತು ಯುಗೇ ವಿಷ್ಣುರ್ವ್ಯಾಸರೂಪೋ ಮಹಾಮುನೇ ವೇದಮೇಕಂ ಸ ಬಹುಧಾ ಕುರುತೇ.. ಯಥಾ ಚ ಕುರುತೇ ತನ್ವಾ.. ವೇದವ್ಯಾಸಾಭಿಧಾನಾ ತು ಸಾ ಸಾ ಮೂರ್ತಿರ್ಮಧುದ್ವಿಷಃ ।**

ಹೀಗೆ ಕಾಲಕಾಲದಲ್ಲಿ ವೇದವನ್ನು ವಿಂಗಡಿಸಿ ಲೋಕಕ್ಕೆ ಕರುಣಿಸಿದ ಪರಮಾತ್ಮನ ಮೂರ್ತಿಯ ಹೆಸರೇ ವೇದವ್ಯಾಸ.

ಅಖಂಡ ವೇದವನ್ನು ನಾಲ್ಕು ಭಾಗವಾಗಿ ವಿಭಜಿಸಿ ಋಗ್ವೇದವನ್ನು – ಪೈಲನಿಗೂ, ಯಜುರ್ವೇದವನ್ನು – ವೈಶಂಪಾಯನನಿಗೂ, ಸಾಮವೇದವನ್ನು – ಜೈಮಿನಿಗೂ, ಅಥರ್ವವೇದವನ್ನು – ಸುಮಂತುವಿಗೂ ಅನುಗ್ರಹಿಸಿದವರು ವ್ಯಾಸರು. ಅವರು ವೇದಾಂತ ತತ್ತ್ವಗಳನ್ನು ಬ್ರಹ್ಮಸೂತ್ರರೂಪದಲ್ಲಿ ಲೋಕಾನುಗ್ರಹಕ್ಕಾಗಿ ರಚಿಸಿಕೊಟ್ಟರು. ವೇದಪ್ರತಿಪಾದ್ಯವಾದ ವಿಧಿ ನಿಷೇಧಾತ್ಮಕ ಕರ್ಮಗಳು ಧರ್ಮಗಳು ಲೋಕದ ಉಳಿವಿಗೆ ಸುಸ್ಥಿತಿಗೆ ಅಗತ್ಯ. ಆದುದರಿಂದ ಅದು ಲೋಕದಲ್ಲಿ ಸುವ್ಯವಸ್ಥಿತವಾಗಿ ಜನರಲ್ಲಿ ಉಳಿಯಬೇಕು. ಅದಕ್ಕಾಗಿ ಸಾಮಾನ್ಯ ಜನತೆ ಸುಲಭವಾಗಿ ಗ್ರಹಿಸುವ ತೆರದಲ್ಲಿ ಅವುಗಳನ್ನು ಲೋಕಕ್ಕೆ ಅನುಗ್ರಹಿಸಲು ೧೮ ಪುರಾಣಗಳನ್ನೂ, ೧೮ ಉಪಪುರಾಣಗಳನ್ನೂ ರಚಿಸಿದವರು ವ್ಯಾಸರು. ಮಹಾಭಾರತದಂತಹ ಘನಜ್ಞಾನಭಂಡಾರವನ್ನು ಲೋಕಕ್ಕೆ ಕೊಟ್ಟವರು. ಹೀಗೆ ಜ್ಞಾನ–ವ್ಯಾಸ ಜೊತೆಜೊತೆಯಲ್ಲಿ ಇರುವ ಅಂಶವಾದುದರಿಂದ ವ್ಯಾಸ ಎಂದರೆ **ಗುರು.** ಇಂತಹ ಗುರುವು ಪರಿಪೂರ್ಣಸ್ವರೂಪಿಯ ಪರಿಪೂರ್ಣತತ್ತ್ವವನ್ನು ಲೋಕಕ್ಕೆ ಬೋಧಿಸಿದ, ಪೂರ್ಣಜ್ಞಾನವನ್ನು ಕರುಣಿಸಿದ ದಿನ 'ಪೂರ್ಣಿಮಾ' ಆಗದೆ ಇನ್ನೇನಾಗಿರಲು ಸಾಧ್ಯ! ಹಾಗಾಗಿ ವ್ಯಾಸಾವತಾರದ ದಿನ '**ಗುರುಪೂರ್ಣಿಮಾ**'.

ಇವರೇ ಪರಾಶರರ ಪುತ್ರರಾದುದರಿಂದ 'ಪಾರಾಶರ್ಯ'ರೆಂದೂ ಬದರಿಕಾಶ್ರಮದಲ್ಲಿ ನೆಲೆಸಿ ಜ್ಞಾನಬೋಧೆ ಮಾಡುತ್ತಿರುವುದರಿಂದ ಬಾದರಾಯಣರೆಂದೂ, ಕೃಷ್ಣಾ (ಯಮುನಾ) ದ್ವೀಪದಲ್ಲಿ ಜನ್ಮ ತಳೆದವರಾದುದರಿಂದ 'ಕೃಷ್ಣದ್ವೈಪಾಯನ'ರೆಂದೂ ವಿವಿಧ ಹೆಸರುಗಳಿಂದ ನಿರ್ದೇಶಿಸಲ್ಪಟ್ಟಿದ್ದಾರೆ.

### ಪೂರ್ಣಿಮಾ ತತ್ತ್ವ

ಹದಿನಾರು ಕಲೆಗಳಿಂದ ತುಂಬಿದ ಚಂದ್ರನನ್ನು 'ಪೂರ್ಣಿಮಾ' ಚಂದ್ರ ಎನ್ನುತ್ತಾರೆ. ವಿವಿಧ ದೇವತೆಗಳ ಅನುಗ್ರಹದಿಂದ ತಾನು ಕಳೆದುಕೊಂಡಿದ್ದ ಎಲ್ಲಾ ಕಲೆಗಳನ್ನೂ ಪಡೆದು ಅವನು ಶುದ್ಧ ಸತ್ವಸಂಪನ್ನನಾಗಿ ಪರಿಪೂರ್ಣ ಅಮೃತಮಯನಾಗುತ್ತಾನೆ. ಎಲ್ಲಾ ಉಪನಿಷತ್ತುಗಳೂ ಜೀವನನ್ನು '**ಷೋಡಶಕಲೋ ವೈ ಪುರುಷಃ**' ಎನ್ನುತ್ತವೆ. ಜೀವನು ಅವಿದ್ಯಾ ಮಾಯಾ ಮೋಹವಶನಾಗಿ ತಾನು ಕಳೆದುಕೊಂಡಿರುವಂತಹ ತನ್ನ ಮಹಿಮೆಯನ್ನು ಗುರುಕೃಪೆಯಿಂದ ಮತ್ತೆ ಪಡೆದುಕೊಂಡು ಪರಿಪೂರ್ಣನಾಗುವುದು ಪೂರ್ಣಿಮಾತತ್ತ್ವ. ಅಕ್ಷರಮಾತ್ರವನ್ನು ಕಲಿಸಿದ ಶಿಕ್ಷಕನಿಂದ, ಸದಾಚಾರ ಸನ್ಮಾರ್ಗ ಸದ್ಧರ್ಮಗಳನ್ನು ಬೋಧಿಸಿದ 'ಬೋಧಕ', ಅವುಗಳನ್ನು ಹೊಂದಲು ಸಹಕರಿಸುವ ಅಧ್ಯಾಪಕ, ಆ ಪರತತ್ತ್ವದ ಮಾರ್ಗದಲ್ಲಿ ನೆಲೆನಿಲ್ಲಿಸುವ ಉಪನ್ಯಾಸಕ, ಚೋದಕ ಬೋಧಕ ಮೋಕ್ಷದ – ಎಂಬ ಎಲ್ಲಾ ಹಂತದ ಗುರುಗಳನ್ನೂ ಸ್ಮರಿಸುವುದು ಈ 'ಪೂರ್ಣಿಮೆ' ಯ ವೈಶಿಷ್ಟ್ಯ.

ನಮ್ಮ ಲೋಪ–ದೋಷಗಳನ್ನು ನಮಗೆ ಕಾಣದಂತೆ ಮಾಡಿಬಿಡುವ 'ಅಹಂ'ನ ಲೀಲೆ ಅಪರಿಮಿತ. ಅದರಿಂದ ಹೊರಬರಲು ಗುರುಕಾರುಣ್ಯ ಬೇಕೇ ಬೇಕು. ಗುರುಕೃಪಾ ಕವಚವನ್ನು ತೊಟ್ಟು ಮಾಯಾ ಪ್ರಭಾವಕ್ಕೊಳಗಾಗದೆ ಸುರಕ್ಷಿತನಾಗಿರುವವನ, ಕವಚರಹಿತನಾಗಿ ಮತ್ತೆ ಮತ್ತೆ ಮಾಯಾಪ್ರಪಂಚದ ಸುಳಿಯಲ್ಲಿ ಸಿಲುಕಿ ಮತ್ತೆ ಮತ್ತೆ, ಜನ್ಮತಳೆಯುವವನ ಸಹಸ್ರಾರು ನಿದರ್ಶನಗಳನ್ನು ಅನೇಕ ಪುರಾಣಗಳು ಅನೇಕ ರೀತಿಯಲ್ಲಿ ಸ್ಪಷ್ಟಪಡಿಸುತ್ತವೆ.

ಸತ್ವ ರಜಸ್ ತಮಸ್ ಈ ಮೂರು ಗುಣಗಳು ಅವುಗಳ ಪ್ರಭಾವದಿಂದ ಪ್ರಕಟಗೊಂಡ ೫ ಭೂತ ತನ್ಮಾತ್ರ ಜ್ಞಾನೇಂದ್ರಿಯ ಕರ್ಮೇಂದ್ರಿಯ ಮೊದಲಾದವುಗಳ ದಪ್ಪ ಪಾದರಸದ ಲೇಪ ಇರುವುದರಿಂದ ಶರೀರದಲ್ಲಿ ಪ್ರಪಂಚವೇ ಪ್ರತಿಫಲಿಸುತ್ತಾ ಇರುತ್ತದೆ. ಪರಿಪೂರ್ಣಜ್ಞಾನಿಯಾದ ಪರಮ ಗುರುವಿನ ಪರಮ ಕಾರುಣ್ಯದಿಂದ ದೊರೆತ ಜ್ಞಾನಾನುಭವದಿಂದ ಈ ಲೇಪ ಕರಗುತ್ತಾ ಕರಗುತ್ತಾ ಹೋದಂತೆ ಈ ಎಲ್ಲದರ ಒಳಗೆ ಹೊರಗೆ ಎಲ್ಲೆಲ್ಲೂ ತುಂಬಿಕೊಂಡಿರುವ ಎಲ್ಲದರ ಆಚೆಗೂ ಇರುವ ಪೂರ್ಣ ಪರತತ್ತ್ವ ಅಲ್ಲೂ ಇಲ್ಲೂ ಅನುಭವಕ್ಕೆ ಬರುತ್ತದೆ. ಅದೇ **ಪೂರ್ಣಿಮಾತತ್ತ್ವ**. ಇಂತಹ ಪೂರ್ಣಿಮಾತತ್ತ್ವವನ್ನು ಜೀವನಾನುಭವಕ್ಕೆ ತಂದು ಕೊಡುವವನೇ ಗುರು. ಇಂತಹ ಗುರುವಿನ, ಯತಿಗಳ, ಆಚಾರ್ಯರ ಪರಮಾನುಗ್ರಹವನ್ನು ಭಾವಿಸಿ ಆದರಿಸಿ ಗೌರವಿಸಿ ಸಲ್ಲಿಸುವ ಪೂಜಾವಿಧಾನವೇ ಗುರುಪೂರ್ಣಿಮೆಯ ವೈಶಿಷ್ಟ್ಯ. ಈ ಉತ್ಸವ ಆಷಾಢಮಾಸದ ಪೂರ್ಣಿಮೆಯ ದಿನ ನೆರವೇರುವುದರಿಂದ ಆ ದಿನವನ್ನು ಗುರುಪೂರ್ಣಿಮಾ ಎಂದು ಕರೆಯಲಾಗುವುದು. ಅಂದಿನಿಂದ ಸಾಮಾಜಿಕ ಬದುಕನ್ನು ನಡೆಸುವ ಲೌಕಿಕರಾಗಲೀ, ಯತಿಗಳಾಗಲೀ, ಸಾಧುಸಂತರಾಗಲೀ ತಮ್ಮ ಪರಿಪೂರ್ಣತೆಯ ಪ್ರಾಪ್ತಿಯ ಸಾಧನೆಗೆ ಅನುಕೂಲವಾದ ಶಾಸ್ತ್ರಾಧ್ಯಯನ, ಉಪನ್ಯಾಸ, ವ್ರತ ನಿಯಮ ಅನುಷ್ಠಾನಾದಿಗಳನ್ನು ಅನುಸರಿಸುವುದು ಸೂಕ್ತ ಎಂದು ಶಾಸ್ತ್ರಗಳು ತಿಳಿಸುತ್ತವೆ.

ಭಾರತೀಯ ಪರಂಪರೆ ಕಾಲದ ವೇಗ ಹಾಗೂ ಉತ್ಕರ್ಷತೆಯಲ್ಲಿ ಜೀವಿಗಳು ತಾವು ಕಳೆದುಕೊಂಡಿರುವ ತಮ್ಮ ಪರಿಪೂರ್ಣತೆಯ ಪುನಃ ಪ್ರಾಪ್ತಿಗೆ ಅನುಷ್ಠಾನಕ್ಕೆ ತಂದಿರುವ ಪವಿತ್ರ ಸಾಧನಾ ಸಂಪ್ರದಾಯವೇ '**ಗುರುಪೂರ್ಣಿಮಾ**'. *

# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 49

ಸ್ವಾಮಿ ನಿತ್ಯಸ್ಥಾನಂದ

## ಸಂಸಾರ ಕರ್ಮಕ್ಷೇತ್ರ

**ಶ್ರೀರಾಮಕೃಷ್ಣರು:** ‘‘ಸಂಸಾರ ಕರ್ಮಕ್ಷೇತ್ರ. ಕರ್ಮ ಮಾಡುತ್ತ ಮಾಡುತ್ತ ಜ್ಞಾನೋದಯವಾಗುತ್ತದೆ. ಗುರು, ಶಿಷ್ಯನಿಗೆ ಕೆಲವು ಕೆಲಸ ಮಾಡುವ ಹಾಗೆ, ಇನ್ನು ಕೆಲವನ್ನು ಮಾಡದೆ ಇರುವ ಹಾಗೆ ಉಪದೇಶವೀಯುತ್ತಾನೆ. ಕರ್ಮ ಮಾಡುತ್ತ ಮಾಡುತ್ತ ಮನಸ್ಸಿನ ಕೊಳೆ ತೊಳೆದುಹೋಗಿಬಿಡುತ್ತದೆ. ಇದು ಒಳ್ಳೆಯ ಡಾಕ್ಟರ್ ಕೈಗೆ ಬಿದ್ದದ್ದೇ ಆದರೆ ಔಷಧ ಕುಡಿಯುತ್ತ ರೋಗ ಹೊರಟುಹೋಗುವ ಹಾಗೆ.

‘‘ಏಕೆ ಭಗವಂತ ನಮ್ಮನ್ನು ಸಂಸಾರದಿಂದ ಬಿಡುಗಡೆ ಮಾಡುತ್ತಿಲ್ಲ ಗೊತ್ತೆ ? ರೋಗ ಗುಣ ಆಗಬೇಕು, ಬಳಿಕ ಬಿಡುಗಡೆ. ಕಾಮ ಕಾಂಚನವನ್ನು ಭೋಗಿಸಬೇಕೆಂಬ ಇಚ್ಛೆ ಹೊರಟು ಹೋದೊಡನೆಯೇ ನಮ್ಮನ್ನು ಬಿಡುಗಡೆ ಮಾಡಿಬಿಡುತ್ತಾನೆ. ಒಮ್ಮೆ ಹೋಗಿ ಆಸ್ಪತ್ರೆಗೆ ದಾಖಲಾದ ಎಂದರೆ ಮತ್ತೆ ಓಡಿ ಬರಲಾಗುವುದಿಲ್ಲ. ರೋಗದ ಕೊಸರು ಸ್ವಲ್ಪ ಇದ್ದರೂ ಡಾಕ್ಟರು ಬಿಟ್ಟುಕೊಡುವುದಿಲ್ಲ.’’ *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೪೭-೪೮)*

ಕರ್ಮವನ್ನು ಯಥಾರ್ಥ ರೀತಿಯಲ್ಲಿ, ನಿಷ್ಕಾಮ ಭಾವದಲ್ಲಿ ಮಾಡುತ್ತ ಹೋದರೆ ಕರ್ಮವೇ ನಿಂತು ಹೋಗುತ್ತದೆ. ಆಗ ಜ್ಞಾನೋದಯವಾಗುತ್ತದೆ. ಬಟ್ಟೆಯು ಕೊಳೆಯಾಗುವುದು ಕೆಲಸದ ಮೂಲಕವೇ; ಅದನ್ನು ಶುಭ್ರಗೊಳಿಸುವುದೂ ಕೆಲಸದ ಮೂಲಕವೇ. ಜ್ಞಾನೋದಯದ ನಂತರ ಎಲ್ಲ ಕರ್ಮವೂ ನಿಂತು ಹೋಗುತ್ತದೆ, ಕರ್ಮ ಮಾಡಿದರೂ ಮಾಡದಂತಿರುತ್ತಾನೆ. ವಿಧಿ ನಿಷೇಧಗಳಾವುವೂ ಅವನ ಪಾಲಿಗಿರುವುದಿಲ್ಲ. **ನಿಸ್ತ್ರೈಗುಣ್ಯೇ ಪಥಿ ವಿಚರತಃ ಕೋ ವಿಧಿಃ ಕೋ ನಿಷೇಧಃ ।** - ‘‘ತ್ರಿಗುಣಾತೀತ ಮಾರ್ಗದಲ್ಲಿ ಸಂಚರಿಸುವವನಿಗೆ ಯಾವ ವಿಧಿನಿಷೇಧಗಳೂ ಇಲ್ಲ.’’ ನಿಜವಾದ ವಿಧಿನಿಷೇಧಗಳಾವುವು?

**ಸ್ಮರ್ತವ್ಯಂ ಸತತಂ ವಿಷ್ಣುಂ ವಿಸ್ಮರ್ತವ್ಯೋ ನ ಜಾತುಚಿತ್ ।**
**ಸರ್ವೇ ವಿಧಿನಿಷೇಧಾಃ ಸ್ಯುರೇತಯೋರೇವ ಕಿಂಕರಾಃ ॥**

‘‘ಯಾವಾಗಲೂ ವಿಷ್ಣುವನ್ನು ಸ್ಮರಿಸಬೇಕು, ಎಂದಿಗೂ ಅವನನ್ನು ಮರೆಯಬಾರದು. ಎಲ್ಲ ವಿಧಿನಿಷೇಧಗಳೂ ಇವೆರಡರಲ್ಲಿಯೇ ಅಡಗಿವೆ.’’ *(ವಿಷ್ಣುಪುರಾಣ)*

ಕರ್ಮದಲ್ಲಿ ಮೂರು ವಿಧ: ಸ್ವಾರ್ಥ, ಪರಾರ್ಥ ಮತ್ತು ಭಗವದರ್ಥ. ತನಗಾಗಿ, ತನ್ನ ಸಂಸಾರಕ್ಕಾಗಿ, ತನ್ನ ಸುಖಹಿತ ಲಾಭಕ್ಕಾಗಿ ಮಾಡುವ ಕರ್ಮ ಸ್ವಾರ್ಥ. ಇಂತಹ ವ್ಯಕ್ತಿಯನ್ನು ಒಂದು ನಿರ್ದಿಷ್ಟ ಆಕಾರವಿರುವ ಮಂಜುಗಡ್ಡೆಗೆ ಹೋಲಿಸಬಹುದು. ಅದು ತನ್ನ ಆಕಾರಕ್ಕೆ ಸೀಮಿತಗೊಂಡಿರುತ್ತದೆ. ಹಾಗೆಯೇ ಸ್ವಾರ್ಥಿಯು ತನ್ನ ದೈಹಿಕ ಮತ್ತು ಅಹಂಕೇಂದ್ರಿತ ವ್ಯಕ್ತಿತ್ವಕ್ಕೆ ಸೀಮಿತಗೊಂಡಿರುತ್ತಾನೆ. ಶಾಖದಿಂದ ಮಂಜುಗಡ್ಡೆಯು ಕರಗಿ ನೀರಾಗಿ ಸುತ್ತಲೂ ಹರಡುತ್ತದೆ. ಹಾಗೆಯೇ ಸಾಮಾಜಿಕ ಆದರ್ಶದ ಶಾಖದಿಂದ ವ್ಯಕ್ತಿಯು ತನ್ನ ಸ್ವಾರ್ಥಪರ ವ್ಯಕ್ತಿತ್ವದ ಪರಿಧಿಯನ್ನು ಮೀರಿ ಸಾಮಾಜಿಕವಾಗಿ ವಿಸ್ತಾರಗೊಳ್ಳುತ್ತಾನೆ. ಆಗ ಅವನ ಕರ್ಮ ಸಮಾಜಮುಖಿಯಾಗುತ್ತದೆ. ಮತ್ತೆ ಆಧ್ಯಾತ್ಮಿಕ ಆದರ್ಶದ ಶಾಖ ಅವನಿಗೆ ತಗುಲಿದಾಗ, ನೀರು ಆವಿಯಾಗಿ ಮೇಲೇರುವಂತೆ, ಅವನು ಮೇಲ್ಮುಖವಾಗಿ ವಿಸ್ತಾರಗೊಳ್ಳುತ್ತ ಭಗವನ್ಮುಖಿಯಾಗುತ್ತಾನೆ.



## ಸಂಸಾರಾಸ್ಪತ್ರೆ

ಶ್ರೀರಾಮಕೃಷ್ಣರು ಸಂಸಾರವನ್ನು ಒಂದು ಆಸ್ಪತ್ರೆಗೆ ಹೋಲಿಸುತ್ತಾರೆ. ಇದು ಒಂದು ಅನ್ವಯಾತ್ಮಕ ದೃಷ್ಟಿ (positive approach). ಸಾಮಾನ್ಯವಾಗಿ ಸಂಸಾರವನ್ನು ಅರಣ್ಯ, ಸಾಗರ, ವೃಕ್ಷ ಮುಂತಾದವುಗಳಿಗೆ ಹೋಲಿಸುವುದು ವಾಡಿಕೆ. ಇದು ಭೀತಿಯ ಭಾವೋದ್ವೇಗವನ್ನು ಉಂಟುಮಾಡುತ್ತದೆ. ಆಸ್ಪತ್ರೆಯಾದರೋ ನಮ್ಮನ್ನು ಅಷ್ಟು ಭಯಪಡಿಸುವುದಿಲ್ಲ; ಅದರಿಂದ ಹೊರಬರುವ ಸಾಧ್ಯತೆಗಳಿವೆ. ಒಳ್ಳೆಯ ಆಸ್ಪತ್ರೆಯನ್ನು ವಿದ್ಯಾಸಂಸಾರಕ್ಕೆ ಹೋಲಿಸಬಹುದು; ಕೆಟ್ಟ ಆಸ್ಪತ್ರೆಯನ್ನು ಅವಿದ್ಯಾಸಂಸಾರಕ್ಕೆ ಹೋಲಿಸಬಹುದು. ವಿದ್ಯಾಸಂಸಾರದಿಂದ ಬೇಗ ಬಿಡುಗಡೆಯಾಗುತ್ತದೆ, ಅವಿದ್ಯಾಸಂಸಾರದಿಂದ ಬಿಡುಗಡೆ ಕಷ್ಟಸಾಧ್ಯ . ಕೆಟ್ಟ ಆಸ್ಪತ್ರೆಗೆ ಸೇರಿದರೆ ಹಿಂತಿರುಗಿ ಬರುವ ಸಂಭವವೂ

ಕಡಿಮೆ. ಆಸ್ಪತ್ರೆಗಳಲ್ಲಿ ಅನೇಕ ಬಗೆಯ ಔಷಧೋಪಚಾರಗಳಿರುವಂತೆ, ಸಂಸಾರಾಸ್ಪತ್ರೆಯಲ್ಲಿಯ ಭವರೋಗ ನಿವಾರಣೆಗೆ ಅನೇಕ ಬಗೆಯ ಸಾಧನವಿಧಾನಗಳಿವೆ.

ಈ ಸಂಸಾರಾಸ್ಪತ್ರೆಯು ಪ್ರಕೃತಿಯ ವಿಕಾಸದಿಂದ ಉಂಟಾಗಿರುವುದು. ಈ ಪ್ರಕೃತಿ ವಿಕಾಸದ ಉದ್ದೇಶ ಪುರುಷನಿಗೆ ಅನೇಕ ಬಗೆಯ ಸುಖದುಃಖಾನುಭವಗಳನ್ನು ನೀಡಿ ಕೊನೆಯಲ್ಲಿ ಅವನನ್ನು ಮುಕ್ತನನ್ನಾಗಿಸುವುದು. ಕೇರಂ ಆಟದಲ್ಲಿ ಒಂದು ಪಾನ್ ಅನೇಕ ಹೊಡೆತ ತಿಂದು, ಮೂಲೆ ಮೂಲೆಯಿಂದ ಒದೆಸಿಕೊಂಡು ಸುತ್ತಾಡಿ ಸುಸ್ತಾಗಿ ಕೊನೆಯಲ್ಲಿ ರಂಧ್ರದಲ್ಲಿ ಹೋಗಿ ಸೇರಿಕೊಳ್ಳುತ್ತದೆ. ಹೀಗೆಯೇ ಪ್ರಕೃತಿಮಾತೆ ನಮ್ಮನ್ನು ಸಂಸಾರಾಸ್ಪತ್ರೆಯಲ್ಲಿ ಸುತ್ತಿಸುತ್ತಾಳೆ. ಸ್ವಾಮಿ ವಿವೇಕಾನಂದರು ಅತ್ಯಾಕರ್ಷಕ, ಹೃತ್‌ಸ್ಪರ್ಶಿಯಾದ ಭಾಷೆಯಲ್ಲಿ ಈ ವಿಷಯವನ್ನು ವ್ಯಕ್ತಪಡಿಸುತ್ತಾರೆ:

''ನಮ್ಮನ್ನು ಪ್ರೀತಿವಾತ್ಸಲ್ಯದಿಂದ ನೋಡಿ ಸಲಹುತ್ತಿದ್ದ ಪ್ರಕೃತಿ ಎಂಬ ದಾದಿಗೆ ತಾನಾಗಿ ನಿಃಸ್ವಾರ್ಥದಿಂದ ವಹಿಸಿಕೊಂಡಿದ್ದ ಕಾಯಕ ಮುಗಿಯಿತು. ತನ್ನ ನೈಜ ಸ್ವಭಾವವನ್ನು ಮರೆತಿದ್ದ ಜೀವನವನ್ನು ತನ್ನ ಕರಕಮಲಗಳಿಂದ ಮೃದುವಾಗಿ ಹಿಡಿದುಕೊಂಡಳೊ ಎಂಬಂತೆ, ಅವನಿಗೆ ಎಲ್ಲ ಬಗೆಯ ಅನುಭವಗಳನ್ನೂ ವಸ್ತುಗಳನ್ನೂ ತೋರಿಸಿ, ಅವನು ತನ್ನ ಸ್ವಭಾವವನ್ನು ತಿಳಿದುಕೊಳ್ಳುವವರೆಗೆ, ಅವನನ್ನು ಅನೇಕ ವಿಧದಿಂದ ಮೇಲುಮೇಲಕ್ಕೆ ತಂದಳು. ಅನಂತರ ಮಾರ್ಗಭ್ರಷ್ಟರಾದ, ಜೀವನದ ಮರಳುಗಾಡಿನಲ್ಲಿ ತಮ್ಮ ಗುರಿಯನ್ನು ಮರೆತ, ಇತರ ಮಕ್ಕಳಿಗೆ ದಾರಿತೋರಿಸುವುದಕ್ಕಾಗಿ ದಯಾಮಯಿಯಾದ ಅವಳು ಬಂದ ದಾರಿಯಿಂದ ಹಿಂದಿರುಗಿದಳು. ಕೊನೆಮೊದಲಿಲ್ಲದೆ ಅವಳು ಹೀಗೆ ಶ್ರಮಿಸುತ್ತಿರುವಳು. ಸುಖದುಃಖಗಳ ಮೂಲಕ, ಪಾಪಪುಣ್ಯಗಳ ಮೂಲಕ, ಅನಾದಿಯಾದ ಜೀವಿಗಳಿಂದ ತುಂಬಿರುವ ಈ ನದಿಯು, ಪರಿಪೂರ್ಣತೆಯ ಸಾಗರದೆಡೆಗೆ ಹರಿಯುತ್ತಿರುವುದು.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೨, ಪು. ೪೬೭)*

**ವಿಚಾರದ ಮಿತಿ**

**ಶ್ರೀರಾಮಕೃಷ್ಣರು**: ''ಹೆಚ್ಚಾಗಿ ವಿಚಾರದಲ್ಲಿ ತೊಡಗುವುದು ಶ್ರೇಯಸ್ಕರವಲ್ಲ, ಭಗವತಿಯ ಪಾದಪದ್ಮದಲ್ಲಿ ಭಕ್ತಿ ಇದ್ದರೆ ಅದೇ ಯಥೇಷ್ಟ. ಅಧಿಕವಾಗಿ ವಿಚಾರದಲ್ಲಿ ತೊಡಗಿದರೆ ಮನಸ್ಸಿನಲ್ಲಿ ಎಲ್ಲ ಕಲಸಿಕೊಂಡು ಬಿಡುತ್ತದೆ. ಕೆರೆಯ ಮೇಲ್ಭಾಗದಲ್ಲಿ ನೀರನ್ನು ತುಂಬಿಕೊಂಡರೆ ಅದು ಶುದ್ಧವಾಗಿರುತ್ತದೆ. ಕೈಯನ್ನು ಆಳಕ್ಕೆ ಹಾಕಿ ಕಲಕಿದರೆ ನೀರು ಬಗ್ಗಡವಾಗುತ್ತದೆ. ಆದ್ದರಿಂದ ಭಗವಂತನನ್ನು ಭಕ್ತಿಗಾಗಿ ಪ್ರಾರ್ಥನೆ ಮಾಡಿಕೊ.''*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೪೯)*

ಅತಿಯಾಗಿ ವಿಚಾರ ಮಾಡುವುದರಿಂದ ಪ್ರತಿಯೊಂದನ್ನೂ ಸಂದೇಹಿಸುವ ಪ್ರವೃತ್ತಿ ಬರುತ್ತದೆ. ಫೀರೊ ಎಂಬ ಸಂದೇಹವಾದಿ (Sceptic) ಇದ್ದ. ಆತ ಒಂದು ದಿನ ಹಳ್ಳಿಯ ಪ್ರದೇಶದಲ್ಲಿ ಹೋಗುತ್ತಿದ್ದಾಗ, ಹತ್ತಿರದಲ್ಲಿಯೇ ''ಬನ್ನಿ, ನನ್ನನ್ನು ರಕ್ಷಿಸಿ'' ಎಂಬ ಅಸಹಾಯಕತೆಯ ಧ್ವನಿ ಕೇಳಿಸಿತು. ಫೀರೋ ಹತ್ತಿರ ಹೋಗಿ ನೋಡುತ್ತಾನೆ, ತನ್ನ ಗುರುವೇ ಹಳ್ಳಕ್ಕೆ ಬಿದ್ದು ಮೇಲೇಳಲಾರದೆ ತೊಳಲಾಡುತ್ತಿದ್ದನು. ಫೀರೋ ಮೊದಲು ಅವನನ್ನು ಮೇಲೆತ್ತುವುದನ್ನು ಬಿಟ್ಟು, ''ನಾನು ನೋಡುತ್ತಿರುವುದು ಒಂದು ಭ್ರಮೆಯಾಗಿರಬಹುದಲ್ಲವೆ!'' ಎಂದು ಮುಂತಾಗಿ ವಿಚಾರ ಮಾಡತೊಡಗಿದ. ಬೇರೊಬ್ಬರು ಬಂದು ಗುರುವನ್ನು ಮೇಲಕ್ಕೆತ್ತಿದರು. ಗುರು ತನ್ನ ಶಿಷ್ಯನ ಬೆನ್ನು ತಟ್ಟಿ, ''ನಿನ್ನಂತಹ ಶಿಷ್ಯನನ್ನು ಪಡೆದದ್ದು ಸಾರ್ಥಕವಾಯಿತು'' ಎಂದರು.

ಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ಸಿ.ಜಿ.ಯೂಂಗ್ ಹೇಳಿದ ಮಾತು:

''ನಮ್ಮ ವರ್ತಮಾನ ಜೀವನವನ್ನು ಆಳುತ್ತಿರುವುದು ವಿಚಾರ ದೇವತೆ. ಅದೇ ನಮ್ಮ ಶ್ರೇಷ್ಠವೂ ದುರಂತವೂ ಆದ ಭ್ರಮೆ. ಈ ವಿಚಾರಶಕ್ತಿಯಿಂದ ನಾವು ಪ್ರಕೃತಿಯನ್ನು ಗೆದ್ದಿದ್ದೇವೆ ಎಂದು ಬೀಗುತ್ತಿದ್ದೇವೆ.''

ಸ್ವಾಮಿ ವಿವೇಕಾನಂದರು ವಿಕಾಸದ ಮೂರು ಹಂತಗಳನ್ನು ಪ್ರಸ್ತಾಪಿಸುತ್ತಾರೆ:

ಹುಟ್ಟುಗುಣ (instinct), ವೈಚಾರಿಕತೆ (reason) ಮತ್ತು ಅಂತರ್ದೃಷ್ಟಿ (intution). ಹುಟ್ಟುಗುಣವು ನಮ್ಮ ಅರಿವಿಲ್ಲದೆ ನಡೆಯುವುದು. ಇದು ಬಹುತೇಕ ಪ್ರಾಣಿಸಹಜ ಪ್ರವೃತ್ತಿಗಳು. ಇಲ್ಲಿ ವಿಚಾರದ ಪಾತ್ರ ಇರುವುದಿಲ್ಲ. ಉದಾಹರಣೆಗೆ ಬಾತುಕೋಳಿಯ ಮರಿ ಹುಟ್ಟಿದಾಕ್ಷಣ ನೀರಿನ ಕಡೆ ಓಡುತ್ತದೆ, ಅನೇಕ ಪ್ರಾಣಿಗಳಿಗೆ ಈಜುವುದು ಹುಟ್ಟುಗುಣವಾಗಿ ಬಂದಿರುತ್ತದೆ (ಕಲಿಯಬೇಕಾಗಿಲ್ಲ). ನಮ್ಮ ಮೈಮೇಲೆ ಸೊಳ್ಳೆ ಕುಳಿತಾಗ ನಮ್ಮ ಕೈ ನಮ್ಮ ಅನುಮತಿಯಿಲ್ಲದೆಯೇ ಸೊಳ್ಳೆಯನ್ನು ಓಡಿಸುತ್ತದೆ, ಸಾಧ್ಯವಾದರೆ ಸಾಯಿಸುತ್ತದೆ. ಆಲೋಚಿಸದೆ, ಸರಿತಪ್ಪುಗಳನ್ನು ಪರಿಗಣಿಸದೆ, ಅಪ್ರಜ್ಞಾಪೂರ್ವಕವಾಗಿ ಮಾಡುವ ಕ್ರಿಯೆಗಳನ್ನು ಹುಟ್ಟುಗುಣ ಎಂದು ಕರೆಯಬಹುದು. ಈ ಗುಣಗಳು ಹುಟ್ಟಿನಿಂದಲೇ ಬಂದಿರಬೇಕಾಗಿಲ್ಲ, ಅಭ್ಯಾಸಬಲದಿಂದಲೂ ಬಂದಿರಬಹುದು. ಮೊದಲು ಪ್ರಜ್ಞಾಪೂರ್ವಕವಾಗಿ ಮಾಡಿದ ಅಭ್ಯಾಸವೇ ಮುಂದೆ Instinct ನಂತೆ ಕೆಲಸ ಮಾಡುತ್ತದೆ. ಇದಕ್ಕಾಗಿಯೇ ಸ್ವಾಮಿ ವಿವೇಕಾನಂದರು, ''ಹುಟ್ಟುಗುಣ (Instinct) ವೆಂಬುದು ಅವನತಿ ಹೊಂದಿದ ವಿಚಾರ (reason)'' ಎಂದು ಹೇಳುತ್ತಾರೆ.

ಎಲ್ಲವನ್ನೂ ಯುಕ್ತಿಯುಕ್ತವಾಗಿ ಪರಾಮರ್ಶಿಸಿ, ವಿಮರ್ಶಿಸಿ, ಕೇವಲ ನಂಬಿಕೆಯ ಮೇಲಲ್ಲದೆ, ಸ್ವೀಕರಿಸುವ ಮತ್ತು ಆಚರಿಸುವ ಪ್ರವೃತ್ತಿಯನ್ನು ವೈಚಾರಿಕತೆ (reason) ಎಂದು ಕರೆಯಬಹುದು. ಎಲ್ಲವನ್ನೂ, ಧರ್ಮವನ್ನೂ ಕೂಡ, ವಿಚಾರ